# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 19/11/2021 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

**ಸಭೆಗೆ ಹಾಜರಿದ್ದವರು**

1) ನೋಡಲ್ ಅಧಿಕಾರಿ
2) ಕಾರ್ಯದರ್ಶಿ
3) SWD ಆದಿಕಾರಿಗಳು
4) ಆರ್.ಐ
5) ಜೆ.ಹೆಚ್.ಐ
6) ಮಲ್ಲೇಶ್ವರಂ ಟ್ರಾಫಿಕ್ ಅಧಿಕಾರಿ
7) BWSSB ಅಧಿಕಾರಿಗಳು
8) ತೋಟಗಾರಿಕೆ ಅಧಿಕಾರಿಗಳು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಗೈರುಹಾಜರಾದವರು**

1. ಪೋಲಿಸ್ ಲಾ ಅಂಡ್ ಆರ್ಡರ್, ಮಲ್ಲೇಶ್ವರಂ
2. ಪೋಲಿಸ್ ಲಾ ಅಂಡ್ ಆರ್ಡರ್,ಶೇಷಾದ್ರಿಪುರಂ
3. ಪೋಲಿಸ್ ಲಾ ಅಂಡ್ ಆರ್ಡರ್,ವೈಯಾಲಿ ಕಾವಲ್
4. ಪೋಲಿಸ್ ಟ್ರಾಫಿಕ್ ಹೈಗ್ರೌಂಡ್
5. ಬೆಸ್ಕಾಂ ಅಧಿಕಾರಿಗಳು

1. ಪದೇ ಪದೇ ಪೋಲಿಸ್ ಅಧಿಕಾರಿಗಳು ಮತ್ತು ಬೆಸ್ಕಾಂ ಅಧಿಕಾರಿಗಳು ಸಭೆಗೆ ಗೈರುಹಾಜರಾಗುವುದು ಕಂಡು ಬಂದಿದ್ದು, ಸದರಿಯವರುಗಳ ಮೇಲಾಧಿಕಾರಿಗಳಿಗೆ ಪತ್ರ ಬರೆಯಲು ನಿರ್ಣಯಿಸಲಾಯಿತು.
2. ಸಭೆಯಲ್ಲಿ ಹಾಜರಿದ್ದ AE Stram Water Drine ರವರಿಗೆ ಕೂಡಲೇ ಈ ಹಿಂದೆ ನಿರ್ಣಯಿಸಿದಂತೆ ಬಸಪ್ಪ ಗಾರ್ಡನ್ ಮೋರಿ ಹತ್ತಿರ ಇರುವ ಬ್ರಿಡ್ಜ್ ಸರಿಪಡಿಸುವುದು ಮತ್ತು ದೊಡ್ಡ ಗಣೇಶ ದೇವಸ್ಥಾನ ಹತ್ತಿರ ಇರುವ ಮೋರಿಯನ್ನು ಕೂಡಲೇ ಸರಿಪಡಿಸ ಬೇಕೆಂದು ನೋಡಲ್ ಅಧಿಕಾರಿಗಳು ಅಭೆಯಲ್ಲಿ ಸೂಚಿಸಿದರು.

3. ಕಳೆದ ಮಧ್ಯಾಹ್ನ 3-4 ದಿನದಿಂದ ಕುಡಿಯುವ ನೀರು ಸರಬರಾಜು ಹಾಗುತ್ತಿಲ್ಲ ಎಂದು ಸಾರ್ವಜನಿಕರು ದೂರಿದ್ದರು, BWSSB ಅಧಿಕಾರಿಯವರು ಮಾತನಾಡುತ್ತಾ ಇನ್ನೆರಡು ದಿನಗಳಲ್ಲಿ ಸಮಸ್ಯೆಯನ್ನು ಪರಿಹರಿಸುವುದು ಎಂದು ತಿಳಿಸಿದರು.
4. ಸುಮಾರು ಕಡೆ ಇರುವಂತಂಹ Debris ಗಳನ್ನು ಇನ್ನೆರಡು ದಿನಗಳಲ್ಲಿ ತೆರವುಗೊಳಿಸಲಾಗುವುದು ಎಂದು ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.
5. ಅನಧಿಕೃತವಾಗಿ ನಿಲ್ಲಿಸುವ ವಾಹನಗಳನ್ನು ಬುಧವಾರ (ದಿನಾಂಕ:24.11.2021) ರಂದು ಜಂಟಿಯಾಗಿ ಸ್ಥಳ ಪರಿಶೀಲನೆಯನ್ನು ಟ್ರಾಫಿಕ್ ಪೋಲಿಸ್ ರವರ ಜೊತೆಗೂಡಿ ಪರಿಶೀಲಿಸಲಾಗುವುದು ಎಂದು ಸಭೆಗೆ ನೋಡಲ್ ಅಧಿಕಾರಿಯವರು ತಿಳಿಸಿದರು.
6. ಒಂಟಿ ಮನೆಗೆ ಸಂಬಂಧಿಸಿದಂತೆ ಈಗಾಗಲೇ ಮಾಣಿಕ್ಯಂ ಸನ್ ಆಫ್ ಚಿನ್ನಸ್ವಾಮಿಯವರ ಮನೆಯು ಬಿದ್ದಿರುವುದರಿಂದ ಸದರಿಯವರ ಹೆಸರನ್ನು ಈ ಯೋಜನೆಗೆ ಪರಿಗಣಿಸಲು ಸಭೆಯು ತೀರ್ಮಾನಿಸಿತು.
7. ಕೆಲವೊಂದು ಕಡೆ ಪಿ.ಕೆ ಗಳು ಬಹಳ ರುಡ್ ಆಗಿ ಮಾತನಾಡುತ್ತಾರೆ ಅದರಿಂದ ಸದರಿಯವರುಗಳಿಗೆ ಸೌಮ್ಯತೆಯಿಂದ ಸಾರ್ವಜನಿಕರಲ್ಲಿ ನಡೆದುಕೊಳ್ಳುವಂತೆ ಸೂಚಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಅಧ್ಯಕ್ಷರ/ನೋಡಲ್ ಅಧಿಕಾರಿಯ ಅನುಮತಿಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ಸಂ.77,
ದತ್ತಾತ್ರೇಯ ದೇವಸ್ಥಾನ
ವಾರ್ಡ್

ಪ್ರತಿಯನ್ನು:-

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.